ಬೆಂಗಳೂರು ಅರೆನಗರೀಕರಣ ಪ್ರದೇಶದ
ಕಾಮನ್ಸ್ ಗಳ ಸಾಮಾನ್ಯ

# ಚಿಟ್ಟೆಗಳು


ದೀಪ್ತಿ ಎನ್.
ಡಾ. ಅಶ್ವಥ ಕೆ. ಎನ್.





ವೃಕ್ಷ
ಪ್ರಕಾಶನ

# ಬೆಂಗಳೂರು ಅರೆನಗರೀಕರಣ ಪ್ರದೇಶದ
# ಕಾಮನ್ಸ್ ಗಳ ಸಾಮಾನ್ಯ ಚಿಟ್ಟೆಗಳು

## Common Butterflies of Commons of Bangalore Peri - Urban Area

An exclusive Handbook about Butterflies of Peri-Urban Bangalore by Wildlife Conservation Group. (Mrs. Deepthi N. and Dr. Ashwatha K. N.) Adavi Field Station, Ontemaranadoddi, Ragiahalli Post, Bangalore Urban District, PIN – 560083.
Tel.: +91 9483996832 Email: wcg.bnp@gmail.com,
Web: www.Indiawcg.org

Collaboration with:
Bengaluru Sustainability Forum, National Centre for Biological Sciences, GKVK, Bellary Road, Bangalore - 560065.
Tel.: +91-80-23666408 / extn 6408
Web: www.bengalurusustainabilityforum.org

Ramakrishna Mission, Shivanahalli, Ragihalli Post, Jigani Hobali, Anekal Taluk, Bangalore Urban District, PIN – 560083.
Tel.: +91 9480993407. Email: shivanahalli@rkmm.org,
Web: www.shivanahalli.rkmm.org

Publication:
Vruksha Prakashana, Adavi Field Station, Ontemaranadoddi, Ragihalli Post, Bangalore – 560083.

| | |
|---|---|
| First impression | : 2024 |
| Pages | : 20 |
| Paper | : 170gsm |
| Price | : 60 |
| Copy Right | : Authors |
| Copies | : 100 |

**Acknowledgement :** Mr. Hariharan I. S., Mr. Vriju Lal, Mr. Nagesh O. S., Mr. Mahadeva K. C., Mr. Dhanaraj, Mrs. Bhagavathi B. M., Ms. Shanthamma S. Ms. Tejaswini J. S., Dr. Naveen Kumar Naik, Dr. Hariprasad T. P. N., Mrs. Savitha S., Mr. Shankarappa K. P.


**Special Thanks:** Bengaluru Sustainability Forum, Ramakrishna Mission, Shivanahalli and Wildlife Conservation Group and team members.

**Layout & Design:** Mrs. Deepthi N. & Dr. Ashwatha K. N.

**Front Cover Image:** Dr. Ashwatha K. N.

**Back Cover Images:** Mr. Vipin Baliga

# ನಮಗೊಂದು ಜಾಗ




**ಅಧ್ಯಯನ ಪ್ರದೇಶದ ನಕ್ಷೆ:** ಬೆಂಗಳೂರು ಅರೆನಗರೀಕರಣ ಪ್ರದೇಶವಾಗಿದ್ದು, ಎರಡು ಗ್ರಾಮ ಪಂಚಾಯಿತಿಗಳು ಒಳಗೊಂಡಿದೆ. ರಾಗಿಹಳ್ಳಿ ಗ್ರಾಮ ಪಂಚಾಯಿತಿ ಮತ್ತು ಮಂಟಪ ಗ್ರಾಮ ಪಂಚಾಯಿತಿಗಳು. ಇವು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿವೆ. ರಾಗಿಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಯನ ಪ್ರದೇಶವು 12°42'2.32"N ಉತ್ತರ ಅಕ್ಷಾಂಶದಿಂದ 12°45'29.57"N ಉತ್ತರ ಅಕ್ಷಾಂಶದವರಿಗೆ ಮತ್ತು 77°33'24.81"E ಪೂರ್ವ ರೇಖಾಂಶದಿಂದ 77°35'48.50"E ಪೂರ್ವ ರೇಖಾಂಶದವರಿಗೆ ಕಂಡುಬರುತ್ತದೆ. ಮಂಟಪ ಗ್ರಾಮ ಪಂಚಾಯಿತಿಯ ಅಧ್ಯಯನ ಪ್ರದೇಶವು 12°46'39.64"N ಉತ್ತರ ಅಕ್ಷಾಂಶದಿಂದ 12°50'19.96"N ಉತ್ತರ ಅಕ್ಷಾಂಶದವರಿಗೆ ಮತ್ತು 77°34'52.47"E ಪೂರ್ವ ರೇಖಾಂಶದಿಂದ 77°37'25.19"E ಪೂರ್ವ ರೇಖಾಂಶದವರಿಗೆ ಕಂಡುಬರುತ್ತದೆ.

**ಆವಾಸ ಮತ್ತು ಅನಿಸಿಕೆ:** ಕಾಮನ್ಸ್ ಗಳು ಅನೇಕ ಸಮುದಾಯಗಳಿಂದ ರಕ್ಷಿಸಲ್ಪಟ್ಟ, ನೂರಾರು ವರ್ಷಗಳಿಂದ ನಿರ್ವಹಿಸಿಕೊಂಡು ಬಂದಿರುವ ಭೂಮಿಯಾಗಿದ್ದು, ನೈಸರ್ಗಿಕ ವಸ್ತುಗಳನ್ನು ಒಳಗೊಂಡಂತೆ ಸಮಾಜದ ಎಲ್ಲಾ ಸದಸ್ಯರಿಗೆ ಪ್ರವೇಶಿಸಬಹುದಾದ ಸಾಂಸ್ಕೃತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳುಳ್ಳ ಪ್ರದೇಶವಾಗಿದೆ. ಉದಾಹರಣೆಗಳೆಂದರೆ ಹಳ್ಳಿ ಅರಣ್ಯಗಳು, ದೇವರ ಕಾಡುಗಳು, ಗುಂಡುತೋಪುಗಳು, ಸ್ಮಶಾನಗಳು, ಕೆರೆಗಳು, ಗೋಮಾಳಗಳು, ಗೋಕಟ್ಟೆಗಳು, ರಸ್ತೆ ಬದಿಯ ಸಾಲು ಮರಗಳು, ಅರಳಿಕಟ್ಟೆಗಳು ಮತ್ತು ಇತ್ಯಾದಿ.

ಇವು ಬೆಂಗಳೂರಿನ ಅರೆನಗರೀಕರಣ ಪ್ರದೇಶದ ಕಾಮನ್ಸ್ ಗಳಾಗಿದ್ದು, ಅತ್ಯಂತ ಜೀವವೈವಿಧ್ಯತೆಯ ಸಮೃದ್ಧ ಭಂಡಾರಗಳಾಗಿವೆ. ಇಂತಹ ಪ್ರದೇಶದಲ್ಲಿ ಶಾಲಾ ಮಕ್ಕಳಿಗೆ ಮತ್ತು ಜನ ಸಾಮಾನ್ಯರಿಗೆ ಕಾಮನ್ಸ್ ಗಳನ್ನು ಮತ್ತು ಅಲ್ಲಿರುವ ಜೀವವೈವಿಧ್ಯತೆಯನ್ನು ಅರ್ಥೈಸಲು ಆ ಪ್ರದೇಶಗಳಲ್ಲಿ ಜೀವವೈವಿಧ್ಯತೆಯ ಸಮೀಕ್ಷೆ ಬಹಳ ಮುಖ್ಯವಾಗುತ್ತದೆ. ಹಾಗಾಗಿ, ಅಧ್ಯಯನ ಪ್ರದೇಶದ ಕಾಮನ್ಸ್ ಗಳಲ್ಲಿ ಸಮೀಕ್ಷೆ ಮಾಡಿ ಅಲ್ಲಿನ ಜೀವವೈವಿಧ್ಯತೆಯನ್ನು ಕಂಡುಕೊಳ್ಳಲಾಗಿದ್ದು, ಅದರಲ್ಲಿ ಚಿಟ್ಟೆಗಳು ಸಹ ಒಳಗೊಂಡಿವೆ. ಚಿಟ್ಟೆಗಳಿಗೆ ಸೂಕ್ತವಾದ ಆವಾಸಗಳಾದ ಕುರುಚಲು ಕಾಡು, ಗೋಮಾಳ (ಹುಲ್ಲುಗಾವಲು), ಕೆರೆ (ಜೌಗು ಪ್ರದೇಶಗಳು), ರಸ್ತೆಬದಿಯ ಸಾಲುಮರಗಳು, ಉದ್ಯಾನವನಗಳು ಮತ್ತು ಜನವಸತಿ ಪ್ರದೇಶಗಳನ್ನು ಇಲ್ಲಿ ನೋಡಬಹುದು.

ಈ ಅರೆ ನಗರೀಕರಣ ಪ್ರದೇಶದ ಕಾಮನ್ಸ್ ಗಳು ಇನ್ನೂ ಸ್ವಲ್ಪ ವರ್ಷಗಳಲ್ಲೇ ಅಭಿವೃದ್ಧಿಯ ಸಲುವಾಗಿ ನಶಿಸಿಹೋಗುವುದರ ಜೊತೆಗೆ ಜೀವವೈವಿದ್ಯತೆಯೂ ಸಹ ನಿರ್ನಾಮವಾಗುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಜೈವಿಕ ಪರಿಸರ ವ್ಯವಸ್ಥೆಯನ್ನು ಅಧ್ಯಯನ ಮಾಡುವಲ್ಲಿ ಸಮುದಾಯಗಳು ಮತ್ತು ಮಕ್ಕಳ ಪಾತ್ರ ಬಹಳ ಮುಖ್ಯ. ಅವರಿಗೆ ಇವುಗಳ ಮಹತ್ವದ ಬಗ್ಗೆ ಶಿಕ್ಷಣ ಮತ್ತು ಅರಿವು ಮೂಡಿಸುವುದು ಬಹಳ ಸೂಕ್ತ. ಆ ನಿಟ್ಟಿನಲ್ಲಿ ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್, ರಾಮಕೃಷ್ಣ ಮಿಷನ್, ಶಿವನಹಳ್ಳಿ ಮತ್ತು Bengaluru Sustainability Forum ಸಂಸ್ಥೆಗಳ Reclaiming the commons at the fringes in peri-urban Bangalore ಎಂಬ ಈ ಯೋಜನೆಯು ಬಹಳ ಮುಖ್ಯ.

# ಚಿಟ್ಟೆಗಳು

ಚಿಟ್ಟೆಗಳು, ಹಲವಾರು ಪ್ರಭೇದ, ಬಣ್ಣ ಹಾಗೂ ವಿವಿಧ ಆಕಾರಗಳಲ್ಲಿ ಕಾಣಸಿಗುವ ಸುಂದರವಾದ ಕೀಟವಾಗಿದೆ. ಪ್ರಾಣಿ ಸಾಮ್ರಾಜ್ಯದ ಆರ್ಥ್ರೋಪೋಡ (Arthropoda) ಎಂಬ ದೊಡ್ಡ ವಿಭಾಗಕ್ಕೆ (Phylum) ಸೇರಿದ್ದು, ಲೆಪಿಡೋಪ್ಟೆರಾ (Lepidoptera) ಗಣಕ್ಕೆ (Order) ಸೇರುತ್ತದೆ. ಆರ್ಥ್ರೋಪೋಡ ಉಪಕೋಟಿಗೆ (Phylum) ಸೇರುವ ಜೀವಿಗಳು ಸಂಯುಕ್ತವಾದ ಅಥವಾ ಕೀಲು ಕಾಲುಗಳು (ಸಂಧಿಪದಿ), ಖಂಡಗಳಾಗಿ ವಿಭಜಿಸಿರುವ ದೇಹ ಮತ್ತು ಬಾಹ್ಯ ಅಸ್ಥಿಪಂಜರವನ್ನು (Exoskeleton) ಹೊಂದಿರುತ್ತವೆ. ಈ ಗುಣಲಕ್ಷಣಗಳನ್ನು ಹೊಂದಿರುವ ಜೇಡ, ಏಡಿ, ಚೇಳು ಇತ್ಯಾದಿ ಪ್ರಾಣಿಗಳೂ ಸಹ ಇದೇ ಉಪಕೋಟಿಗೆ ಸೇರುತ್ತವೆ. ಆದರೆ ಇವುಗಳು ಕೀಟಗಳಲ್ಲ. ಕಾರಣ, ಈ ಗುಂಪಿಗೆ ಸೇರುವ ಜೀವಿಯು ಕೀಟವೆಂದು ಕರೆಸಿಕೊಳ್ಳಬೇಕಾದರೆ ಅವುಗಳಿಗೆ ಆರು ಕಾಲುಗಳು, ನಾಲ್ಕು ರೆಕ್ಕೆಗಳು ಹಾಗೂ ತಲೆ, ಎದೆ ಮತ್ತು ಹೊಟ್ಟೆ ಎಂದು ಮೂರು ಭಾಗಗಳಾಗಿ ವಿಭಜಿತವಾಗಿರುವ ದೇಹವು ಇರಬೇಕಾಗುತ್ತದೆ.

## ಚಿಟ್ಟೆಗಳ ವಿಕಾಸ

ನಲವತ್ತು ಕೋಟಿ ವರ್ಷಗಳ ಹಿಂದೆ ಭೂಮಿಯ ಮೇಲೆ ಕಾಣಿಸಿಕೊಂಡ ಪ್ರಾಣಿಗಳಲ್ಲಿ ಕೀಟಗಳೂ ಸಹ ಇದ್ದವೆಂದು ಪಳೆಯುಳಿಕೆಗಳು ನಿರೂಪಿಸುತ್ತವೆ. ಅದಾಗಲೆ ಭೂಮಿಯ ಮೇಲಿದ್ದ ಸಸ್ಯಗಳನ್ನು ಆಹಾರವಾಗಿ ಬಳಸಿಕೊಂಡು ವಿಭಿನ್ನ ಬಗೆಯ ಕೀಟಗಳು ವಿಕಾಸಗೊಂಡವು. ಎಲೆಗಳನ್ನು ಜಗಿಯಲು, ಹೂವಿನ ಮಕರಂದವನ್ನು ಹೀರಲು ಸೂಕ್ತವಾಗುವಂತೆ ಬಾಯಿಯು ವಿಕಾಸಗೊಂಡವು. ಸಸ್ಯಗಳಿಂದ ಆಹಾರ ಪಡೆದ ಕೀಟಗಳು ಅವುಗಳಿಗೆ ಪರಾಗಸ್ಪರ್ಶವನ್ನು ಮಾಡಿಕೊಡುವುದರ ಮೂಲಕ ಸಸ್ಯಗಳ ಸಂತಾನೋತ್ಪತ್ತಿಯಲ್ಲಿ ಸಹಾಯ ಮಾಡುತ್ತವೆ. ೧೫೦ ದಶಲಕ್ಷ ವರ್ಷಗಳ ಕಾಲ ಇದೇ ರೀತಿಯ ಒಡನಾಟದಿಂದ ಕೀಟಗಳು ಹಾಗೂ ಸಸ್ಯಗಳು ಪರಸ್ಪರ ವಿಕಾಸಗೊಳ್ಳುತ್ತಾ ಬಂದಿವೆ.

## ಚಿಟ್ಟೆಗಳ ಜೀವನ ಚಕ್ರ

ಚಿಟ್ಟೆಯ ಜೀವನ ಚಕ್ರವು ಮೊಟ್ಟೆ, ಮರಿಹುಳು (ಲಾರ್ವ), ಕೋಶ ಮತ್ತು ಪ್ರೌಢಾವಸ್ಥೆ ಎಂಬ ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ. ಹೆಣ್ಣು ಚಿಟ್ಟೆಗಳು ನಿರ್ದಿಷ್ಟವಾದ ಸಸ್ಯಗಳ ಎಲೆ ಅಥವಾ ಕೊಂಬೆಗಳ ಮೇಲೆ ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಯಿಂದ ಹೊರಬರುವ ಮರಿಹುಳುವಿನ ಮೊದಲ ಆಹಾರ, ಮೊಟ್ಟೆಯ ಕವಚವೇ ಆಗಿರುತ್ತದೆ. ಈ ಮರಿಹುಳುವು ತಾನಿರುವ ಸಸ್ಯವನ್ನು, ತನ್ನ ದೇಹದ ತೂಕಕ್ಕಿಂತಲೂ ಸಾವಿರಾರು ಪಟ್ಟು ಹೆಚ್ಚು ತಿನ್ನುತ್ತಾ, ದೇಹದ ಹೊರ ಪೊರೆಯನ್ನು ಹಂತ ಹಂತವಾಗಿ ಕಳಚಿ ಬೆಳೆಯುತ್ತದೆ. ಮುಂದಿನ ಹಂತಗಳಲ್ಲಿ ಬೆಳವಣಿಗೆಗೆ ಬೇಕಾಗುವ ಶಕ್ತಿಯನ್ನು ಆಹಾರದಿಂದಲೇ ಸಂಗ್ರಹಿಸಿಟ್ಟುಕೊಳ್ಳುತ್ತದೆ. ಆಶ್ಚರ್ಯವೆಂದರೆ, ತಮ್ಮ ಪ್ರಿಯವಾದ ಈ ಆತಿಥೇಯ ಸಸ್ಯವು ಸಿಗದೆ ಹೋದಲ್ಲಿ, ಮರಿಹುಳುವು ಉಪವಾಸ ಮಾಡಿ ಸಾವನ್ನಪ್ಪುತ್ತದೆ.

ಕೊನೆಯ ಬಾರಿಗೆ ಪೊರೆಯನ್ನು ಕಳಚುತ್ತಾ, ತನ್ನ ಎಲ್ಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಕೋಶಾವಸ್ಥೆಯನ್ನು ತಲುಪುತ್ತದೆ. ಈ ಕೋಶವು (pupa or chrysalis) ನಿದ್ರಾವಸ್ಥೆಯಲ್ಲಿದ್ದಂತೆ ಕಂಡರೂ ಅದರ ಶಾರೀರಿಕ ಕ್ರಿಯೆಗಳು ಪರಮಾವಸ್ಥೆಯನ್ನು ತಲುಪಿರುತ್ತವೆ. ಕೋಶದ ಒಳಗೆ ವರ್ಣರಂಜಿತ ರೆಕ್ಕೆಗಳು ಹಾಗೂ ಸಂತಾನೋತ್ಪತ್ತಿಗೆ ಬೇಕಾಗುವ ಎಲ್ಲಾ ಅಂಗಗಳ ರಚನೆಯಾಗುತ್ತವೆ. ಈ ಮನಮೋಹಕ ರೂಪಾಂತರ ಪೂರ್ಣಗೊಂಡ ನಂತರ ಪ್ರೌಢಚಿಟ್ಟೆಯಾಗಿ ಕೋಶದಿಂದ ಹೊರಬರುತ್ತದೆ.

Kingdom : Animalia
Phylum : Arthropoda
Class : Insecta
Order : Lepidoptera
Family : Hesperiidae
Genus : Telicota

ಸಾಮಾನ್ಯ ಹೆಸರು: **ಕಡು ತಾಳೆ ಗುರಿ**
ಇಂಗ್ಲೀಷ್ ಹೆಸರು: Dark Palm Dart
ವೈಜ್ಞಾನಿಕ ಹೆಸರು: Telicota ancilla



© Hariharan I. S.

**ಗಾತ್ರ :** ೩೫ – ೪೦ ಮಿ.ಮೀಟರ್

**ಆವಾಸಸ್ಥಾನ :** ರಸ್ತೆ ಬದಿಯ ಚಿಕ್ಕ ಗಿಡಗಳು, ಬಿದಿರಿನ ಕಾಡು ಮತ್ತು  ಇತರೆ ತೆರೆದ ಪ್ರದೇಶಗಳು.

**ಸ್ಥಳೀಯತೆ :** ಭಾರತ, ಶ್ರೀಲಂಕಾ ಮತ್ತು ಮಲೇಶಿಯಾ.

**ಗುಣಲಕ್ಷಣಗಳು :** ರೆಕ್ಕೆಗಳು ಕಪ್ಪು ಬಣ್ಣದಲ್ಲಿದ್ದು ಹಳದಿ ಮಿಶ್ರಿತ ಕಿತ್ತಲೆ ಬಣ್ಣದ ಪಟ್ಟಿಗಳನ್ನು ಹೊಂದಿರುತ್ತದೆ.

**ವೈಶಿಷ್ಟ್ಯತೆ :** ಅತ್ಯಂತ ವೇಗವಾಗಿ ಹಾರಾಡುತ್ತಾ, ರಸ್ತೆ ಬದಿಯ ಗಿಡಗಳ ಎಲೆಗಳ ಮೇಲೆ ಕುಳಿತು ಬಿಸಿಲು ಕಾಯುತ್ತವೆ.

**ಆತಿಥೇಯ ಸಸ್ಯಗಳು :** ಪೊಯೇಸೀ (Poaceae) ಕುಟುಂಬಕ್ಕೆ ಸೇರುವ ವಿವಿಧ ಜಾತಿಯ ಹುಲ್ಲುಗಳು.

Kingdom : Animalia
Phylum : Arthropoda
Class : Insecta
Order : Lepidoptera
Family : Hesperiidae
Genus : Parnara

ಸಾಮಾನ್ಯ ಹೆಸರು: **ಭತ್ತಾಸಿಗಳು**
ಇಂಗ್ಲೀಷ್ ಹೆಸರು: Straight Swift
ವೈಜ್ಞಾನಿಕ ಹೆಸರು: Parnara guttatus



© Hariharan I. S.

**ಗಾತ್ರ :** ೩೨–೩೬ ಮಿ.ಮೀಟರ್

**ಆವಾಸಸ್ಥಾನ :** ಅರಣ್ಯ ಪ್ರದೇಶ, ಉದ್ಯಾನವನ, ರಸ್ತೆ ಬದಿ, ನದಿ ದಂಡೆಗಳು ಮತ್ತು ಇತರೆ ಹುಲ್ಲಿರುವಂತಹ ಪ್ರದೇಶಗಳು.

**ಸ್ಥಳೀಯತೆ :** ಆಗ್ನೇಯ ಏಷ್ಯಾಧ ವಿವಿಧ ಪ್ರದೇಶಗಳು.

**ಗುಣಲಕ್ಷಣಗಳು :** ರೆಕ್ಕೆಗಳು ಖಾಕಿ ಬಣ್ಣವಿದ್ದು, ಮೇಲಿನ ಮತ್ತು ಕೆಳಗಿನ ರೆಕ್ಕೆಗಳ ಮುಂಭಾಗದಲ್ಲಿ ಬಿಳಿಯ ಚುಕ್ಕೆಗಳನ್ನು ಹೊಂದಿರುತ್ತದೆ. ಈ ಬಿಳಿಯ ಚುಕ್ಕೆಗಳ ಆಧಾರದ ಮೇಲೆ ಪ್ರಭೇದಗಳನ್ನು ಬೇರ್ಪಡಿಸಬಹುದು.

**ವೈಶಿಷ್ಟ್ಯತೆ :** ಹೂ ಗಿಡಗಳ ಮೇಲೆ ಸಾಮಾನ್ಯವಾಗಿ ಕಂಡುಬರುತ್ತದೆ ಹಾಗೂ ವೇಗವಾಗಿ ಎಲೆಗಳ ಮೇಲೆ ಹಾರಿ ಬಂದು ಕುಳಿತು ನಿಧಾನವಾಗಿ ತಮ್ಮ ರೆಕ್ಕೆಗಳನ್ನು ಬಿಚ್ಚುತ್ತವೆ.

**ಆತಿಥೇಯ ಸಸ್ಯಗಳು :** ಪೋಯೇಸಿ (Poaceae) ಕುಟುಂಬದ ಮೆಕ್ಕೆ ಜೋಳದ ಗಿಡ ಹಾಗೂ ಭತ್ತದ ಗಿಡ

Kingdom : Animalia
Phylum : Arthropoda
Class : Insecta
Order : Lepidoptera
Family : Hesperiidae
Genus : Iambrix

ಸಾಮಾನ್ಯ ಹೆಸರು: **ಕರಿಗಂದು ಲೋಲಾಕು**
ಇಂಗ್ಲೀಷ್ ಹೆಸರು: Chestnut Bob
ವೈಜ್ಞಾನಿಕ ಹೆಸರು: Iambrix salsala



© Hariharan I. S.

**ಗಾತ್ರ :** ೨೬ – ೩೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಎಲೆ ಉದುರುವ ಕಾಡುಗಳು, ಕುರುಚಲು ಕಾಡುಗಳು ಮತ್ತು ನಿತ್ಯ ಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ದಕ್ಷಿಣ ಮತ್ತು ದಕ್ಷಿಣ ಆಗ್ನೇಯ ಏಷ್ಯಾ.

**ಗುಣಲಕ್ಷಣಗಳು :** ರೆಕ್ಕೆಗಳು ಕಂದು ಹಾಗೂ ಖಾಕಿ ಮಿಶ್ರಿತ ತೆಳು ಕಿತ್ತಳೆ ಬಣ್ಣವನ್ನು ಹೊಂದಿದ್ದು, ರೆಕ್ಕೆಗಳ ಹಿಂಭಾಗದಲ್ಲಿ ಬಿಳಿ ಅಥವಾ ಕಪ್ಪು ಬಣ್ಣದ ಮಚ್ಚೆ ಹೊಂದಿರುತ್ತದೆ.

**ವೈಶಿಷ್ಟ್ಯತೆ :** ರಸ್ತೆ ಬದಿಯ ಗಿಡಗಳ ಎಲೆಗಳ ಮೇಲೆ ಗುಂಪು ಗುಂಪಾಗಿ ಒಂದರ ಹಿಂದೆ ಒಂದು ಹಾರುತ್ತವೆ, ಚಿಕ್ಕ ಹೂಗಿಡಗಳ ಹತ್ತಿರ ಕಾಣಸಿಗುತ್ತವೆ ಹಾಗೂ ಎಲೆಗಳ ಮೇಲೆ ಕೂತು ಬಿಸಿಲು ಕಾಯುತ್ತವೆ.

**ಆತಿಥೇಯ ಸಸ್ಯಗಳು :** ಪೊಯೇಸೀ (Poaceae) ಕುಟುಂಬಕ್ಕೆ ಸೇರುವ ವಿವಿಧ ಜಾತಿಯ ಬಿದಿರು ಹಾಗೂ ಇತರೆ ಹುಲ್ಲುಗಳು.

Kingdom : Animalia.
Phylum : Arthropoda
Class : Insecta
Order : Lepidoptera
Family : Papilionidae
Genus : Papilio

ಸಾಮಾನ್ಯ ಹೆಸರು: **ಕಸ್ತೂರಿ**
ಇಂಗ್ಲೀಷ್ ಹೆಸರು: **Common mormon**
ವೈಜ್ಞಾನಿಕ ಹೆಸರು: **Papilio polytes**



© Hariharan I. S.

**ಗಾತ್ರ :** ೯೦–೧೦೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳು.

**ಸ್ಥಳೀಯತೆ :** ಏಷ್ಯಾ ಖಂಡ

**ಗುಣಲಕ್ಷಣಗಳು :** ಮೇಲಿನ ರೆಕ್ಕಗಳು ಕಪ್ಪಾಗಿದ್ದು, ಅಂಚಿನಲ್ಲಿ ಬಿಳಿ ಮಚ್ಚೆಗಳ ಸರಣಿ ಇರುತ್ತದೆ ಹಾಗೂ ತಳದ ಹೊರಭಾಗದಲ್ಲಿ ಅರ್ಧ ಚಂದ್ರಾಕೃತಿಯ ಬಿಳಿ ಮಚ್ಚೆಗಳಿರುತ್ತದೆ. ಹೆಣ್ಣು ಚಿಟ್ಟೆ ಗಂಡನ್ನು ಹೋಲುತ್ತದೆ ಮತ್ತು ಕೆಲವು ರೂಪಗಳು ಕೆಂಪಿ ಹಾಗೂ ರಕ್ತ ಕೆಂಪಿ ಚಿಟ್ಟೆಗಳನ್ನು ಹೋಲುತ್ತದವೆ.

**ವೈಶಿಷ್ಟ್ಯತೆ :** ಪರಭಕ್ಷಕರಿಂದ ತಪ್ಪಿಸಿಕೊಳ್ಳಲು ರುಚಿಕರವಲ್ಲದ ಚಿಟ್ಟಗಳ ರೂಪವನ್ನು ಅನುಕರಿಸುವುದು ವಿಶೇಷವಾಗಿದೆ. ಗಂಡು ಚಿಟ್ಟೆಗಳು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ರುಟೇಸಿ (Rutaceae) ಕುಟುಂಬಕ್ಕೆ ಸೇರುವ ನಿಂಬೆ ಜಾತಿಯ ಸಸ್ಯಗಳು, ಕರಿಬೇವು, ಬೇಲದ ಮರ ಇತ್ಯಾದಿ.

Kingdom : Animalia
Phylum : Arthropoda
Class : Insecta
Order : Lepidoptera
Family : Papilionidae
Genus : Pachliopta

ಸಾಮಾನ್ಯ ಹೆಸರು: **ಕೆಂಪಿ**
ಇಂಗ್ಲೀಷ್ ಹೆಸರು: Common Rose
ವೈಜ್ಞಾನಿಕ ಹೆಸರು: Pachliopta aristolochiae



© Hariharan I. S.

**ಗಾತ್ರ :** ೮೦–೧೦೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ಏಷ್ಯಾದ ಖಂಡದ ವಿವಿಧ ಪ್ರದೇಶಗಳು

**ಗುಣಲಕ್ಷಣಗಳು** : ದೇಹವು ಕೆಂಪಾಗಿದ್ದು, ಮೇಲಿನ ರೆಕ್ಕೆಯ ಮುಂಭಾಗದಲ್ಲಿ ಬಿಳಿಯ ಪಟ್ಟೆಗಳಿದ್ದು, ಕೆಳಗಿನ ಭಾಗದ ಅಂಚಿನಲ್ಲಿ ಕೆಂಪು ಮಚ್ಚೆಗಳಿರುತ್ತದೆ. ಇದೇ ಅಂಚಿನ ಒಳಭಾಗದಲ್ಲಿ ಬಿಳಿ ಪಟ್ಟೆಯಿರುತ್ತದೆ.

**ವೈಶಿಷ್ಟ್ಯತೆ :** ತಮ್ಮ ಪ್ರಕಾಶಮಾನವಾದ ಮೈಬಣ್ಣದಿಂದ ಪರಬಕ್ಷಕಗಳಿಗೆ ಎಚ್ಚರಿಕೆ ನೀಡುತ್ತದೆ. ಅತಿಥೇಯ ಸಸ್ಯಗಳಿಂದ ದೇಹದೊಳಗೆ ಶೇಖರಿಸಿರುವ ವಿಷವು ಇವುಗಳನ್ನು ತಿನ್ನಲಾಗದಂತೆ ಮಾಡುತ್ತದೆ. ಗಂಡು ಚಿಟ್ಟೆಗಳು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ಅರಿಸ್ಟೊಲೊಕಿಯಾಸಿ (Aristolochiaceae) ಕುಟುಂಬಕ್ಕೆ ಸೇರುವ ಈಶ್ವರಿ ಬಳ್ಳಿ (Aristolochia indica) ಜಾತಿಯ ಸಸ್ಯಗಳು.

Kingdom : Animalia
Phylum : Arthropoda
Class : Insecta
Order : Lepidoptera
Family : Papilionidae
Genus : Pachliopta

ಸಾಮಾನ್ಯ ಹೆಸರು: **ರಕ್ತ ಕೆಂಪಿ**
ಇಂಗ್ಲೀಷ್ ಹೆಸರು: Crimson Rose
ವೈಜ್ಞಾನಿಕ ಹೆಸರು: Atrophaneura hector



© Dr. Ashwatha K. N.

**ಗಾತ್ರ :** ೯೦–೧೧೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ಏಷ್ಯಾದ ಖಂಡದ ವಿವಿಧ ಪ್ರದೇಶಗಳು.

**ಗುಣಲಕ್ಷಣಗಳು :** ದೇಹವು ಕೆಂಪಾಗಿದ್ದು, ಮೇಲಿನ ರೆಕ್ಕೆಯ ಅಂಚುಗಳಲ್ಲಿ ಬಿಳಿ ಪಟ್ಟಿಯಿದ್ದು, ಕೆಳಗಿನ ರೆಕ್ಕೆಗಳಲ್ಲಿ ಕೆಂಪು ಮಚ್ಚೆಗಳಿರುತ್ತವೆ.

**ವೈಶಿಷ್ಟತೆ :** ಕೆಂಪು ಬಣ್ಣ, ಹಾರಾಡುವ ರೀತಿ ಮತ್ತು ಪ್ರಕಾಶಮಾನವಾದ ರೆಕ್ಕೆಗಳಿಂದ ತಮ್ಮ ಪರಬಕ್ಷಕಗಳಿಗಳಿಂದ ತಪ್ಪಿಸಿಕೊಳ್ಳುತ್ತದೆ. ಅತಿಥೇಯ ಸಸ್ಯಗಳಿಂದ ದೇಹದೊಳಗೆ ಶೇಖರಿಸಿರುವ ವಿಷವು ಇವುಗಳನ್ನು ತಿನ್ನಲಾಗದಂತೆ ಮಾಡುತ್ತದೆ.

**ಅತಿಥೇಯ ಸಸ್ಯಗಳು :** ಅರಿಸ್ಟೊಲೊಕಿಯಾಸಿ (Aristolochiaceae) ಕುಟುಂಬಕ್ಕೆ ಸೇರುವ ಈಶ್ವರಿ ಬಳ್ಳಿ (Aristolochia indica) ಜಾತಿಯ ಸಸ್ಯಗಳು.

Kingdom : Animalia
Phylum : Arthropoda
Class : Insecta
Order : Lepidoptera
Family : Pieridae
Genus : Eurema

ಸಾಮಾನ್ಯ ಹೆಸರು: **ಕಿರಿ ಹಳದಿ**
ಇಂಗ್ಲೀಷ್ ಹೆಸರು: Small Grass Yellow
ವೈಜ್ಞಾನಿಕ ಹೆಸರು: Eurema brigitta



© Hariharan I. S.

**ಗಾತ್ರ :** ೩೦–೪೦ ಮಿ.ಮೀಟರ್

**ಆವಾಸಸ್ಥಾನ :** ಕುರುಚಲು ಕಾಡುಗಳು

**ಸ್ಥಳೀಯತೆ:** ಏಷ್ಯಾ, ಆಸ್ಟ್ರೇಲಿಯಾ ಮತ್ತು ಆಫ್ರಿಕಾ ಖಂಡಗಳ ವಿವಿಧ ಪ್ರದೇಶಗಳು.

**ಗುಣಲಕ್ಷಣಗಳು :** ರೆಕ್ಕೆಗಳು ಹಳದಿ ಬಣ್ಣವಿದ್ದು,ಮೇಲಿನ ರೆಕ್ಕೆಗಳ ಮುಂಭಾಗವು ಕಪ್ಪು ಅಂಚನ್ನು ಹೊಂದಿರುತ್ತವೆ. ಕೆಳಗಿನ ರೆಕ್ಕೆಗಳ ಅಂಚಿನ ತುದಿಯಲ್ಲಿ ಸ್ವಲ್ಪ ಕಪ್ಪು ಬಣ್ಣವಿರುತ್ತದೆ. ಹಿಂಭಾಗದಲ್ಲಿ ಕಪ್ಪು ಮಚ್ಚೆಗಳಿರುತ್ತವೆ.

**ವೈಶಿಷ್ಟ್ಯತೆ :** ನೆಲದ ಸಮೀಪದಲ್ಲಿ ಹಾರಾಡುತ್ತಾ ಗುಂಪುಗಳಲ್ಲಿ ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ಫ್ಯಾಬೇಸಿ (Fabaceae) ಕುಟುಂಬದ ನೆಲ ತಂಗಡಿ ಗಿಡ, ನೆಲ ತಗಚೆ ಗಿಡ

Kingdom : Animalia
Phylum : Arthropoda
Class : Insecta
Order : Lepidoptera
Family : Pieridae
Genus : Eurema

ಸಾಮಾನ್ಯ ಹೆಸರು: **ಹಳದಿ**
ಇಂಗ್ಲೀಷ್ ಹೆಸರು: Common grass yellow
ವೈಜ್ಞಾನಿಕ ಹೆಸರು: Eurema hecabe



© Hariharan I. S.

**ಗಾತ್ರ :** ೪೦–೫೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳು.

**ಸ್ಥಳೀಯತೆ :** ಏಷ್ಯಾ, ಆಸ್ಟ್ರೇಲಿಯಾ ಮತ್ತು ಆಫ್ರಿಕಾ ಖಂಡಗಳ ವಿವಿಧ ಪ್ರದೇಶಗಳು.

**ಗುಣಲಕ್ಷಣಗಳು :** ರೆಕ್ಕೆಗಳು ಹಳದಿ ಬಣ್ಣವಿದ್ದು, ಮೇಲಿನ ರೆಕ್ಕೆಗಳಲ್ಲಿ ಕಡುಗಂದು ಬಣ್ಣದ ಅಂಚು ಹಾಗೂ ಹಿಂಭಾಗದಲ್ಲಿ ಕಪ್ಪು ಮಚ್ಚೆಗಳಿರುತ್ತವೆ.

**ವೈಶಿಷ್ಟ್ಯತೆ :** ಪೊದೆಗಳಲ್ಲಿ, ಹೂಗಿಡ ಮತ್ತು ಆಹಾರ ಸಸ್ಯಗಳ ಬಳಿ ನೆಲಕ್ಕೆ ಸಮೀಪವಾಗಿ ಹೆಚ್ಚಾಗಿ ಕಾಣಿಸುತ್ತವೆ ಮತ್ತು ಗುಂಪುಗಳಲ್ಲಿ ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ಫ್ಯಾಬೇಸಿ (Fabaceae) ಕುಟುಂಬದ ಅಗಸೆ ಮರ, ಕಕ್ಕೆ ಗಿಡ, ಕೆಂಪು ತುರಾಯಿ ಮರ, ಮೈಮೊಸೇಸಿ (Mimosaceae) ಕುಟುಂಬದ ಮುಟ್ಟಿದರೆ ಮುನಿ ಗಿಡ ಇತ್ಯಾದಿ.

Kingdom : Animalia
Phylum : Arthropoda
Class : Insecta
Order : Lepidoptera
Family : Pieridae
Genus : Catopsilia

ಸಾಮಾನ್ಯ ಹೆಸರು: **ಅಲೆಮಾರಿ**
ಇಂಗ್ಲೀಷ್ ಹೆಸರು: Common emigrant
ವೈಜ್ಞಾನಿಕ ಹೆಸರು: Catopsilia pomona



© Hariharan I. S.

**ಗಾತ್ರ :** ೫೫ – ೮೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ಏಷ್ಯಾ ಮತ್ತು ಆಸ್ಟ್ರೇಲಿಯಾ ಖಂಡಗಳ ವಿವಿಧ ಪ್ರದೇಶಗಳು.

**ಗುಣಲಕ್ಷಣಗಳು :** ರೆಕ್ಕೆಗಳು ಹಳದಿ ಅಥವಾ ತೆಳು ಹಸಿರು ಮಿಶ್ರಿತ ಬಿಳಿ ಬಣ್ಣದ್ದಾಗಿವೆ. ಕೆಲವೊಮ್ಮೆ ಹೆಣ್ಣು ಚಿಟ್ಟೆಗಳು ತೆಳು ಹಳದಿ ಬಣ್ಣವಿದ್ದು ಕೆಳಗಿನ ರೆಕ್ಕೆಗಳ ಹಿಂಭಾಗದ ಕೋಶದ ತುದಿಯಲ್ಲಿ ಕಂದು ಬಣ್ಣದ ಮಚ್ಚೆಗಳನ್ನು ಹೊಂದಿರುತ್ತವೆ.

**ವೈಶಿಷ್ಟ್ಯತೆ :** ಬೇಸಿಗೆಯಲ್ಲಿ ಸಾವಿರಾರು ಚಿಟ್ಟೆಗಳು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ. ಗುಂಪಿನಲ್ಲಿ ವಲಸೆ ಹೋಗುತ್ತವೆ.

**ಆತಿಥೇಯ ಸಸ್ಯಗಳು :** ಫ್ಯಾಬೇಸಿ (Fabaceae) ಕುಟುಂಬದ ಸೀಮೆತಂಗಡಿ ಮರ, ಮುತ್ತುಗ ಮರ.

Kingdom : Animalia
Phylum : Arthropoda
Class : Insecta
Order : Lepidoptera
Family : Lycaenidae
Genus : Leptotes

ಸಾಮಾನ್ಯ ಹೆಸರು: **ಜೀಬ್ರಾ ನೀಲಿ**
ಇಂಗ್ಲೀಷ್ ಹೆಸರು: Zebra blue
ವೈಜ್ಞಾನಿಕ ಹೆಸರು: Tarucus plinius



© Hariharan I. S.

**ಗಾತ್ರ :** ೨೨ – ೩೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು,ಎಲೆ ಉದುರುವ ಕಾಡುಗಳು ನಿತ್ಯ ಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ಭಾರತ, ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ

**ಗುಣಲಕ್ಷಣಗಳು :** ಮೇಲಿನ ರೆಕ್ಕೆಗಳ ಮುಂಭಾಗವು ಹೊಳೆಯುವ ನೇರಳೆ ಮಿಶ್ರಿತ ನೀಲಿ ಬಣ್ಣವಿದ್ದು, ಬಿಳಿಯ ಬಣ್ಣದ ಹಿಂಭಾಗವು ಜೀಬ್ರಾದಂತೆ ಕಂದು ಪಟ್ಟಿಗಳನ್ನು ಹೊಂದಿರುತ್ತದೆ. ಕೆಳಗಿನ ರೆಕ್ಕೆಯ ಹಿಂಭಾಗದ ಬಾಲದ ಬಳಿ ಕಿತ್ತಳೆ ವರ್ತುಳವುಳ್ಳ ಎರಡು ಕಪ್ಪು ಮಚ್ಚೆಗಳಿರುತ್ತವೆ.

**ವೈಶಿಷ್ಟ್ಯತೆ :** ಗಂಡು ಚಿಟ್ಟೆಗಳು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ಪ್ಲಂಬಾಜಿನೇಸಿಯೇ (Plumbaginaceae) ಕುಟುಂಬದ ಚಿತ್ರಮೂಲ ಗಿಡದ ಜಾತಿಗೆ ಸೇರಿದ ವಿವಿಧ ಸಸ್ಯಗಳು, ಫ್ಯಾಬೇಸಿ (Fabaceae) ಕುಟುಂಬದ ಮುಟ್ಟಿದ ಮುನಿ ಗಿಡ, ನೀಲಿ ಗಿಡ (Indigofera tinctoria), ಗುಲಗಂಜಿ ಗಿಡ ಇತ್ಯಾದಿ.

Kingdom : Animalia
Phylum : Arthropoda
Class : Insecta
Order : Lepidoptera
Family : Lycaenidae
Genus : Jamides

ಸಾಮಾನ್ಯ ಹೆಸರು: **ಆಗಸ ನೀಲಿ**
ಇಂಗ್ಲೀಷ್ ಹೆಸರು: Common Cerulean
ವೈಜ್ಞಾನಿಕ ಹೆಸರು: Jamides celeno



© Hariharan I. S.

**ಗಾತ್ರ :** ೨೭ – ೪೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಎಲೆ ಉದುರುವ ಕಾಡುಗಳು, ಕುರುಚಲು ಕಾಡುಗಳು ಮತ್ತು ನಿತ್ಯ ಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ದಕ್ಷಿಣ ಮತ್ತು ಆಗ್ನೇಯ ಏಷ್ಯಾ ಖಂಡದ ವಿವಿಧ ಪ್ರದೇಶಗಳು.

**ಗುಣಲಕ್ಷಣಗಳು :** ರೆಕ್ಕೆಗಳು ನೀಲಿ ಮತ್ತು ಬೂದು ಮಿಶ್ರಿತ ನೆಲದ ಬಣ್ಣವಿದ್ದು, ಬಿಳಿ ಗೆರೆಗಳನ್ನು ಹೊಂದಿರುತ್ತದೆ. ಕೆಳಗಿನ ರೆಕ್ಕೆಯಲ್ಲಿ ಬಾಲಕ್ಕೆ ಹೊಂದಿಕೊಂಡಂತೆ ಕಿತ್ತಳೆ ವರ್ತುಲವುಳ್ಳ ಕಪ್ಪು ಮಚ್ಚೆಯಿರುತ್ತದೆ.

**ವೈಶಿಷ್ಟ್ಯತೆ :** ಹೂ ಗಿಡಗಳ ಮೇಲೆ ಹೆಚ್ಚಾಗಿ ಕಂಡುಬರುತ್ತದೆ ಹಾಗೂ ಗಂಡು ಚಿಟ್ಟೆಗಳು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ಫ್ಯಾಬೇಸಿ (Fabaceae) ಕುಟುಂಬದ ಹೊಂಗೆ, ಮುತ್ತುಗ ಹಾಗೂ ಕಾಡು ಹೆಸವೆಯಂತಹ ಸಸ್ಯಗಳು, ಜಿಂಗಿಬೆರೇಸಿ (Zingiberaceae) ಕುಟುಂಬದ ಏಲಕ್ಕಿ ಗಿಡ, ಮೆಲಿಯಾಸಿ (Meliacea) (ಬೇವಿನ ಕುಟುಂಬ) ಕುಟುಂಬದ ಲಿಂಬಾರದಂತಹ ಸಣ್ಣ ಮರಗಳು.

Kingdom : Animalia
Phylum : Arthropoda
Class : Insecta
Order : Lepidoptera
Family : Lycaenidae
Genus : Zizina

ಸಾಮಾನ್ಯ ಹೆಸರು: **ಹುಲ್ಲು**
ಇಂಗ್ಲೀಷ್ ಹೆಸರು: Lesser Grass Blue
ವೈಜ್ಞಾನಿಕ ಹೆಸರು: Zizina otis



© Hariharan I. S.

**ಗಾತ್ರ :** ೨೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ದಕ್ಷಿಣ ಏಷ್ಯಾ ಖಂಡದ ವಿವಿಧ ಪ್ರದೇಶಗಳು

**ಗುಣಲಕ್ಷಣಗಳು :** ರೆಕ್ಕೆಗಳ ಮುಂಭಾಗವು ನೇರಳೆ ಮಿಶ್ರಿತ ನೀಲಿ ಬಣ್ಣವಿದ್ದು ಕಡುಗಂದು ಬಣ್ಣದ ಅಂಚನ್ನು ಹೊಂದಿದೆ. ಹಿಂಭಾಗವು ಕಂದು ಬಣ್ಣದಲ್ಲಿದ್ದು ಬಿಳಿ ವರ್ತುಳವುಳ್ಳ ಕಪ್ಪು ಚುಕ್ಕೆಗಳನ್ನು ಹೊಂದಿರುತ್ತದೆ. ಕೆಳಗಿನ ರೆಕ್ಕೆಯ ಹಿಂಭಾಗದ ಬಣ್ಣವು ತೆಳುವಾಗಿದ್ದು, ಚುಕ್ಕೆಗಳು ಚಿಕ್ಕಾದಾಗಿರುತ್ತದೆ

**ವೈಶಿಷ್ಟ್ಯತೆ :** ಚಿಕ್ಕ ಗಿಡಗಳ ಹೂಗಳಿಂದ ಮಕರಂದವನ್ನು ಹೀರುತ್ತದೆ. ಬೆಳಗಿನ ಜಾವದ ಬಿಸಿಲನ್ನು ಕಾಯುತ್ತದೆ ಮತ್ತು ಉಳಿದ ಸಮಯದಲ್ಲಿ ನೆರಳಿನಲ್ಲಿರುತ್ತದೆ

**ಆತಿಥೇಯ ಸಸ್ಯಗಳು :** ಅಮರಂತೇಸಿ (Amaranthaceae) ಕುಟುಂಬದ ಹರಿವೆ ಸೊಪ್ಪು, (Fabaceae) ಫ್ಯಾಬೇಸಿ ಕುಟುಂಬದ ಕಾಡು ಮೆಂತೆ ಜಾತಿಗೆ ಸೇರಿದ ವಿವಿಧ ಸಸ್ಯಗಳು,ಜೈಗೋಫಿಲೇಸಿ (Zygophyllaceae) ಕುಟುಂಬದ ನೆಗ್ಗಿನ ಮುಳ್ಳಿನ ಗಿಡ.

Kingdom : Animalia
Phylum : Arthropoda
Class : Insecta
Order : Lepidoptera
Family : Nymphalidae
Genus : Tirumala

ಸಾಮಾನ್ಯ ಹೆಸರು: **ನೀಲಿ ಹುಲಿ**
ಇಂಗ್ಲೀಷ್ ಹೆಸರು: Blue tiger
ವೈಜ್ಞಾನಿಕ ಹೆಸರು: Tirumala limniace



© Hariharan I. S.

**ಗಾತ್ರ :** ೯೦–೧೦೦ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು, ಎಲೆ ಉದುರುವ ಕಾಡುಗಳು

**ಸ್ಥಳೀಯತೆ:** ದಕ್ಷಿಣ ಮತ್ತು ದಕ್ಷಿಣ ಆಗ್ನೇಯ ಏಷ್ಯಾ.

**ಗುಣಲಕ್ಷಣಗಳು :** ರೆಕ್ಕೆಗಳ ಮುಂಭಾಗವು ಕಡು ಕಂದು ಅಥವಾ ಕಪ್ಪು ಬಣ್ಣವಿದ್ದು ಅರೆ ಪಾರದರ್ಶಕವಾದ ಬಿಳಿ ಮಿಶ್ರಿತ ನೀಲಿ ಬಣ್ಣದ ಚುಕ್ಕೆಗಳು ಹಾಗೂ ಗೆರೆಗಳನ್ನು ಹೊಂದಿರುತ್ತದೆ. ಹಿಂಭಾಗವು ಇದೇ ರೀತಿ ಇದ್ದು ಕೊಂಚ ತೆಳು ಬಣ್ಣದ್ದಾಗಿರುತ್ತದೆ.

**ವೈಶಿಷ್ಟ್ಯತೆ :** ಈ ಚಿಟ್ಟೆಗಳು ಮಳೆಗಾಲದಲ್ಲಿ ಪಶ್ಚಿಮ ಘಟ್ಟದಿಂದ ಪೂರ್ವ ಘಟ್ಟಗಳೆಡೆ, ಚಳಿಗಾಲದಲ್ಲಿ ಪೂರ್ವ ಘಟ್ಟಗಳಿಂದ ಪಶ್ಚಿಮ ಘಟ್ಟಗಳೆಡೆ  ವಲಸೆ ಹೋಗುವುದನ್ನು ಕಾಣಬಹುದು.

**ಅತಿಥೇಯ ಸಸ್ಯಗಳು :** ಪೊಯೇಸೀ (Poaceae) ಕುಟುಂಬದ ಕಬ್ಬಿನ ಗಿಡ, ಅಪೊಸಿನೇಸಿ (Apocynaceae) ಕುಟುಂಬದ ಎಕ್ಕದ ಗಿಡ, ಬುಗುಡಿ ಬಳ್ಳಿ, ಮೇಣದ ಬಳ್ಳಿ ಇತ್ಯಾದಿ.

Kingdom : Animalia.
Phylum : Arthropoda
Class : Insecta
Order : Lepidoptera
Family : Nymphalidae
Genus : Euploea

ಸಾಮಾನ್ಯ ಹೆಸರು: **ಕಾಕ**
ಇಂಗ್ಲೀಷ್ ಹೆಸರು: **Common crow**
ವೈಜ್ಞಾನಿಕ ಹೆಸರು: **Euploea core**



© Dr. Ashwatha K. N.

**ಗಾತ್ರ :** ೮೫ – ೯೫ ಮಿ.ಮೀಟರ್

**ಆವಾಸಸ್ಥಾನ:** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳು.

**ಸ್ಥಳೀಯತೆ:** ದಕ್ಷಿಣ ಏಷ್ಯಾ ಮತ್ತು ಆಸ್ಟ್ರೇಲಿಯಾ

**ಗುಣಲಕ್ಷಣಗಳು :** ಕಪ್ಪು ರೆಕ್ಕೆಗಳ ಅಂಚಿನಲ್ಲಿ ಬಿಳಿಯ ಮಚ್ಚೆಗಳ ಉದ್ದವಾದ ಸಾಲಿರುತ್ತದೆ.

**ವೈಶಿಷ್ಟ್ಯತೆ :** ಈ ಚಿಟ್ಟೆಗಳ ದೇಹದಿಂದ ಬರುವ ವಾಸನೆಯು, ಪರಬಕ್ಷಕಗಳು ಇವುಗಳನ್ನು ತಿನ್ನಲಾಗದಂತೆ ಮಾಡುತ್ತದೆ.

**ಆತಿಥೇಯ ಸಸ್ಯಗಳು :** ಕಣಗಲೆ (Nerium oleander), ವಿವಿಧ ಜಾತಿಯ ಅಂಜೂರದ ಗಿಡಗಳು

Kingdom : Animalia
Phylum : Arthropoda
Class : Insecta
Order : Lepidoptera
Family : Nymphalidae
Genus : Phalanta

ಸಾಮಾನ್ಯ ಹೆಸರು: **ಚಿರತೆ**
ಇಂಗ್ಲೀಷ್ ಹೆಸರು: Common Leopard
ವೈಜ್ಞಾನಿಕ ಹೆಸರು: Phalanta phalantha



© Hariharan I. S.

**ಗಾತ್ರ :** ೫೦–೫೫ ಮಿ.ಮೀಟರ್

**ಆವಾಸಸ್ಥಾನ :** ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಕಾಡುಗಳು.


**ಸ್ಥಳೀಯತೆ:** ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ ವಿವಿಧ ಪ್ರದೇಶಗಳು

**ಗುಣಲಕ್ಷಣಗಳು :** ರೆಕ್ಕೆಗಳು ಕಿತ್ತಳೆ ಬಣ್ಣವಿದ್ದು, ಮೇಲ್ಭಾಗದಲ್ಲಿ ಕಪ್ಪು ಚುಕ್ಕೆ ಮತ್ತು ಗೆರೆಗಳನ್ನು ಹೊಂದಿರುತ್ತದೆ. ಕೆಳಗಿನ ರೆಕ್ಕೆಗಳು ತೆಳು ಕಿತ್ತಳೆ ಬಣ್ಣವಿದ್ದು, ಕೆಲವು ಕಪ್ಪು ಚುಕ್ಕೆಗಳನ್ನು ಹೊಂದಿರುತ್ತದೆ. ಎರಡೂ ರೆಕ್ಕೆಗಳಲ್ಲಿ ನೇರಳೆ ಬಣ್ಣದ ಹೊಳಪನ್ನು ಕಾಣಬಹುದಾಗಿದೆ.

**ವೈಶಿಷ್ಟ್ಯತೆ :** ಹೂ ಗಿಡಗಳ ಮೇಲೆ ವೇಗವಾಗಿ ಹಾರಾಡುತ್ತಾ ಮಕರಂದವನ್ನು ಹೀರುತ್ತದೆ ಹಾಗೂ ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ.

**ಆತಿಥೇಯ ಸಸ್ಯಗಳು :** ಸ್ಯಾಲಿಕೇಸಿ (Salicaceae) ಕುಟುಂಬದ ನೀರುವಂಜಿ ಮರ (Indian Willow tree) ಮತ್ತು ಸ್ಯಾಲಿಕೇಸಿ (Salicaceae) ಕುಟುಂಬದ ವಿವಿಧ ಸಸ್ಯಗಳು.

ಈ ಕಿರು ಹೊತ್ತಿಗೆಯಲ್ಲಿ ಬೆಂಗಳೂರು ಅರೆನಗರೀಕರಣ ಪ್ರದೇಶದ ಕಾಮನ್ಸ್ ಗಳಲ್ಲಿ ಸಿಗುವಂತಹ ಸಾಮಾನ್ಯ ಚಿಟ್ಟೆಗಳ ಕುರಿತು ಮಕ್ಕಳಿಗೆ ಮತ್ತು ಜನ ಸಾಮಾನ್ಯರಿಗೆ ಅವುಗಳ ಆವಾಸಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಸಂಕ್ಷಿಪ್ತ ಮಾಹಿತಿ ಮತ್ತು ಛಾಯಾಚಿತ್ರಗಳ ಮೂಲಕ ವಿವರಿಸಲಾದ ಒಂದು ಸಣ್ಣ ಕಿರು ಹೊತ್ತಿಗೆ.



Common Nawab Pupa.



Swallowtail spp caterpillar © Vipin baliga

In Association with :

BENGALURU SUSTAINABILITY FORUM

Ramakrishna Mission, Shivanahalli

WCG Wildlife Conservation Group

₹ 60